2) ಉಡುಪಿ

ಯಾವುದೇ ಕಾಮಗಾರಿಗಳನ್ನು ಪ್ರಾರಂಭಿಸಿಲ್ಲ.

ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಗ್ರಾಮದಲ್ಲಿ ನೇಕಾರರಿಗೆ ಮನೆ ಕಟ್ಟಿಸಿಕೊಡುವುದು.

1948(2064)

ಶ್ರೀ ಕೌಜಲಗಿ ಮಹಾಂತೇಶ ಶಿವಾನಂದ(ಬೈಲಹೊಂಗಲ): ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ನೇಕಾರರಿಗೆ ಮನೆ ಕಟ್ಟಿಸಿಕೊಡಲು ಸರ್ಕಾರದವರು ಯಾವ ಕ್ರಮ ಹಮ್ಮಿಕೊಳ್ಳಲಾಗಿದೆ?

ಆ. ಕೇಂದ್ರ ಸರ್ಕಾರದ ನೆರವಿನಿಂದ ರಾಜ್ಯದಲ್ಲಿ ನೇಕಾರರಿಗೆ ಯಾವ ಯಾವ ಸ್ಥಳಗಳಲ್ಲಿ ಮನೆ ಕಟ್ಟಿಸಿಕೊಡಲು ಕ್ರಮ ಕೈಗೊಳ್ಳಲಾಗಿದೆ?

ಇ. ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ವಕ್ಕುಂದ ಗ್ರಾಮದಲ್ಲಿ ನೇಕಾರರಿಗೆ ಮನೆ ಕಟ್ಟಿಸಿಕೊಳ್ಳಲು ಕೇಂದ್ರ ಸರ್ಕಾರದಿಂದ 2 ಕೋಟಿ ರೂ.ಗಳು ಮಂಜೂರಾದ ಸಂಗತಿ ನಿಜವೇ? ಹಾಗಿದ್ದಲ್ಲಿ ಮಂಜೂರಾದ ಹಣವನ್ನು ಪಡೆಯಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ?

ಈ. ಮನೆ ಕಟ್ಟಲು ಅಥವಾ ವರ್ಕ್‌ಶೆಡ್ ಕಟ್ಟಲು ಜಮೀನು ಲಭ್ಯವಿಲ್ಲದಿದ್ದಲ್ಲಿ ಸರ್ಕಾರ ಮಾರುಕಟ್ಟೆಯ ದರದ ಪ್ರಕಾರ ಜಮೀನು ಖರೀದಿ ಮಾಡಿ ನೇಕಾರರಿಗೆ ಮನೆ ಕಟ್ಟಲು ಕ್ರಮ ಕೈಗೊಳ್ಳಲಾಗುವುದೆ?

ಉ. ಹಾಗಿದ್ದಲ್ಲಿ ವಕ್ಕುಂದ ಗ್ರಾಮದಲ್ಲಿ ಸರ್ಕಾರಿ ಜಮೀನು ಲಭ್ಯವಿರದ ಇರುವುದರಿಂದ ಮತ್ತು ನೇಕಾರರಿಗೆ ಸ್ಥಳಕೊಡಲು ಶಕ್ಯರು ಇಲ್ಲದೆ ಇರುವುದರಿಂದ ಮಾರುಕಟ್ಟೆಯ ದರದ ಪ್ರಕಾರ ಜಮೀನು ಖರೀದಿಸಿ ಮನೆಗಳನ್ನು ಕಟ್ಟಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ.ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು):

ಅ. ವಸತಿ ರಹಿತ ಕೈಮಗ್ಗ ನೇಕಾರರಿಗೆ ವಸತಿ ಕಾರ್ಯಾಗಾರ ಸ್ಥಾಪಿಸಿಕೊಡುವ

ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಈ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ.

ಆ. ಈ ಯೋಜನೆಯಡಿ ಈ ಕೆಳಕಂಡ ಜಿಲ್ಲೆಗಳಲ್ಲಿ ಮನೆಗಳನ್ನು ಕಟ್ಟಿಸಿಕೊಡಲಾಗಿದೆ.

1. ಗುಲ್ಬರ್ಗಾ, 2. ಬೆಳಗಾಂ, 3. ಬಳ್ಳಾರಿ, 4. ಹಾಸನ, 5. ಬಿಜಾಪುರ, 6. ಬಾಗಲಕೋಟೆ, 7. ತುಮಕೂರು, 8. ಕೋಲಾರ, 9. ಬೆಂಗಳೂರು (ಗ್ರಾ), 10. ಚಿತ್ರದುರ್ಗ ಮತ್ತು 11. ಶಿವಮೊಗ್ಗ ಜಿಲ್ಲೆ.

ಇ. ನಿಜವಲ್ಲ.

ಈ. ಕೇಂದ್ರ ಪುರಸ್ಕೃತ ಯೋಜನೆಯಡಿ ವಸತಿ ಕಾರ್ಯಾಗಾರ ನಿರ್ಮಿಸಿಕೊಡಲಾಗುತ್ತಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ನಿವೇಶನ ಹೊಂದಿರುವ ನೇಕಾರರಿಗೆ ಮಾತ್ರ ಈ ಸೌಲಭ್ಯ ಒದಗಿಸಿಕೊಡಲಾಗುವುದು ನಿವೇಶನ ರಹಿತ ನೇಕಾರರಿಗೆ ನಿವೇಶನ ಒದಗಿಸಿ ಮನೆ ಕಟ್ಟಿಸಿಕೊಡುವ ಪ್ರಸ್ತಾವನೆ ಸರ್ಕಾರದಲ್ಲಿಲ್ಲ.

ಉ. ಇಂತಹ ಯಾವುದೇ ಪ್ರಸ್ತಾವನೆ ಅಥವಾ ಯೋಜನೆ ಸರ್ಕಾರದಲ್ಲಿರುವುದಿಲ್ಲ.

ಸಣ್ಣ ಕೈಗಾರಿಕೆಗಳ ಆರ್ಥಿಕ ಮುಗ್ಗಟ್ಟು

1949(2065)

ಶ್ರೀ ಕೌಜಲಗಿ ಮಹಂತೇಶ ಶಿವಾನಂದ(ಬೈಲಹೊಂಗಲ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿ ಎಷ್ಟು ಸಣ್ಣ ಕೈಗಾರಿಕಾ ಉದ್ದಿಮೆಗಳು ನೋಂದಾಯಿಸಲ್ಪಟ್ಟವೆ. (ಜಿಲ್ಲಾವಾರು ಮಾಹಿತಿ ನೀಡುವುದು)

2. ಇದರಲ್ಲಿ ನೊಂದಾಯಿಸಿದ ಎಷ್ಟು ಉದ್ದಿಮೆಗಳು ನಷ್ಟದಿಂದಾಗಿ ಮುಚ್ಚಲ್ಪಟ್ಟವೆ.

3. ಸಣ್ಣ ಕೈಗಾರಿಕೆಗಳನ್ನು ಸರ್ಕಾರದವರು ಪ್ರೋತ್ಸಾಹ ನೀಡುವ ಉದ್ದೇಶದಿಂದ ರಿಯಾಯಿತಿ ಬಡ್ಡಿ ಹಾಗೂ ಇತರ ಸಹಾಯವನ್ನು ಕೂಡ ನಿರ್ಣಯಿಸುವುದರಿಂದ